ಅಧ್ಯಕ್ಷರು:– ಆಯಿತು. Question Hour is over. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 24.01.2014 ರ ಮೊದಲನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 166 ಪ್ರಶ್ನೆಗಳ ಪೈಕಿ 123 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

(ಅನುಬಂಧ–1)

3) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

1) ವಿಷಯ: ಚಿಂತಾಮಣಿ ತಾಲ್ಲೂಕಿನ ರೈತರ ಪಂಪ್‌ಸೆಟ್‌ಗಳಿಗೆ ದಿನಕ್ಕೆ 6 ಘಂಟೆ ತ್ರಿ–ಫೇಸ್ ವಿದ್ಯುತ್ ನೀಡುವ ಬಗ್ಗೆ.

ಶ್ರೀ ಎಂ. ಕೃಷ್ಣಾ ರೆಡ್ಡಿ (ಚಿಂತಾಮಣಿ):– ಮಾನ್ಯ ಅಧ್ಯಕ್ಷರೆ, ಚಿಂತಾಮಣಿಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಮೂರರಿಂದ ಐದು ತಿಂಗಳವರೆಗೆ ಅರ್ಜಿ ಹಾಕಿದರೂ ನಮ್ಮಲ್ಲಿ ಬಜೆಟ್ ಇಲ್ಲ ಎನ್ನುವ ಉತ್ತರವನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು:– ನೀವು ಪಂಪ್‌ಸೆಟ್‌ಗಳಿಗೆ ದಿನಕ್ಕೆ 6 ಘಂಟೆ ತ್ರಿ–ಫೇಸ್ ವಿದ್ಯುತ್ ನೀಡುವ ಬಗ್ಗೆ ಪ್ರಶ್ನೆ ಕೇಳಿದ್ದು, ಈಗ ಬೇರೆ ಪ್ರಶ್ನೆಕೇಳುತ್ತಿದ್ದೀರಿ.

ಎಂ.ಕೆ. ಕೃಷ್ಣಾರೆಡ್ಡಿ:– ಅದನ್ನೇ ಕೇಳುತ್ತಿದ್ದೇನೆ. 3–4–5 ತಿಂಗಳುಗಳ ಕಾಲ ಅರ್ಜಿಯನ್ನು ಕೊಟ್ಟರೂ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುತ್ತಿಲ್ಲ.

ಅಧ್ಯಕ್ಷರು:– ನೀವು ಆ ರೀತಿ ಕೇಳಬೇಡಿ. 6 ಘಂಟೆಗಳ ತ್ರಿ–ಫೇಸ್ ವಿದ್ಯುತ್ ನೀಡಬೇಕೆಂದು ಕೇಳಿದ್ದೀರಿ. ಅದರ ಬಗ್ಗೆ ಸಂಕ್ಷಿಪ್ತವಾಗಿ ಕೇಳಿ.